ಅಸಲು ದಾವಾ ನಂ. **277/2013**

ಡಿ ಡಬ್ಲ್ಯೂ **:1**

(ಇಂದು ದಿನಾಂಕಃ **18.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಬಿ ಎಂ ರವರಿಂದಃ

ತಕರಾರನ್ನು ನಾನೇ ಹೇಳಿ ಬರೆಸಿರುತ್ತೇನೆ. ತಕರಾರಿನಲ್ಲಿ ದಿಃ 20.12.1943 ರಲ್ಲಿ 1 ಗುಂಟೆ ಜಾಗವನ್ನು ಕೇಶವಮೂರ್ತಿಶೆಟ್ಟಿ ರವರು ಖರೀದಿಸಿರುತ್ತಾರೆಂದು ಹೇಳಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ಹೇಳಿರುವ ಚೆಕ್ಕುಬಂದಿ ಮರೆತುಹೋಗಿರುತ್ತದೆ. ಸದರಿ 1 ಗುಂಟೆ ಜಾಗ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸದರಿ 1 ಗುಂಟೆ ಜಾಗವನ್ನು ದಿಃ 20.12.1943 ರಂದು ನನ್ನ ಅಜ್ಜನಿಂದ ಖರೀದಿಸಿರುತ್ತಾರೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ 1 ಗುಂಟೆ ಜಾಗ ಯಾವುದು ಎಂದು ನನಗೆ ಗೊತ್ತಿದೆ. ಸದರಿ 1 ಗುಂಟೆಯ ಚೆಕ್ಕುಬಂದಿ ಗೊತ್ತಿಲ್ಲ. ಸದರಿ 1 ಗುಂಟೆ ದೀಪಕ್ ಬಾರ್ ನ ಹಿಂದೆ ಬರುತ್ತದೆ. ಸದರಿ ಆಸ್ತಿಯ ಅಳತೆ ಮಾಡಿಸಿಲ್ಲ. ಸದರಿ 1 ಗುಂಟೆ ಜಾಗ ಮುಖ್ಯ ರಸ್ತೆಯಿಂದ ಎಷ್ಟು ಅಡಿ ದೂರ ಇದೆ ಎಂದು ಗೊತ್ತಿಲ್ಲ. ಸದರಿ 1 ಗುಂಟೆಯ ದಕ್ಷಿಣ ದಿಕ್ಕಿಗೆ ಯಾವುದೇ ರಸ್ತೆ ಹೋಗಿಲ್ಲ. ಸದರಿ ಆಸ್ತಿಯ ಹಿಂದೆ ವಾದಿಯ ಆಸ್ತಿ ಇರುತ್ತದೆ. ಎಷ್ಟು ಅಡಿ ದೂರದಲ್ಲಿದೆ ಎಂದು ಗೊತ್ತಿಲ್ಲ. ನನ್ನ ಅಜ್ಜ ಕ್ರಯಪತ್ರದಲ್ಲಿ ಸದರಿ 1 ಗುಂಟೆ ಆಸ್ತಿ ದಕ್ಷಿಣಕ್ಕೆ ಬರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 1 ಗುಂಟೆ ದೀಪಕ್ ಬಾರ್ ನ ಹಿಂದೆ ಬರುವುದಿಲ್ಲ, ಅದು ಮುಖ್ಯ ರಸ್ತೆಯಿಂದ ಉತ್ತರಕ್ಕೆ ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ಕ್ರಯ ಪತ್ರದಲ್ಲಿ ಬರೆದಿದ್ದರೂ ಸಹ ಉದ್ದೇಶಪೂರ್ವಕವಾಗಿ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ 1 ಗುಂಟೆ ಪೂರ್ವ ಪಶ್ಚಿಮ 11 ಗಜ, ಉತ್ತರ ದಕ್ಷಿಣ 16 ಗಜ ಎಂದು ಬರೆಯಲಾಗಿರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಒಪ್ಪಿಕೊಂಡಿರುವ ಆಸ್ತಿಯಲ್ಲಿ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೊಸದಾಗಿ ಜಾಗ ಖರೀದಿಸಿ ಕಟ್ಟಡ ಕಟ್ಟಿರುತ್ತೇನೆಂದು ನುಡಿಯುತ್ತಾರೆ. 20.12.1943 ರ ಕ್ರಯ ಪತ್ರ ನೋಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಸರ್ವೆ ನಂಬರ್ 34/4 ರ ಬಗ್ಗೆ ನನಗೆ ಗೊತ್ತಿಲ್ಲ. ಈ ಹಿಂದೆ ನಮ್ಮ ಅಜ್ಜ ಖರೀದಿಸಿದ ಜಾಗ ಚಿಕ್ಕಬ್ಯಾಡಗೆರೆ ಗ್ರಾಮಕ್ಕೆ ಸೇರಿದ ಜಾಗ ಆಗಿರುತ್ತದೆ ಎಂದರೆ ಸರಿ. ನಂತರ ಸದರಿ ಗ್ರಾಮದ ಆಸ್ತಿಗಳ ಖಾತೆಯನ್ನು ಮುನಿಸಿಪಾಲಿಟಿಯವರು

ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವರ್ಧಯ್ಯಂಗಾರ್ ರವರಿಗೆ ಸೇರಿದ ಆಸ್ತಿಯ ಖಾತೆ ಯಾವಾಗ ಆಗಿರುತ್ತದೆ ಎಂದು ತಿಳಿದುಕೊಂಡಿದ್ದಿರ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಸರ್ವೆ ನಂಬರ್ 34/4 ಎ, ಬಿ, ಸಿ, ಡಿ ಎಂದು 4 ಪೋಡಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ಗುಂಟೆ ಆಸ್ತಿಯ ಪೋಡ್ ನಂಬರ್ ಗೊತ್ತಿಲ್ಲ.

ವರ್ಧಯ್ಯಂಗಾರ್ ರವರಿಗೆ ಸರ್ವೆ ನಂಬರ್ 34/4ಬಿ ಸೇರಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾವು ಖರೀದಿಸಿರುವ ಆಸ್ತಿ ಸರ್ವೆ ನಂಬರ್ 34/4ಡಿ ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವರ್ಧಯ್ಯಂಗಾರ್ ರವರಿಂದ ಖರೀದಿಸಿರುವ ಆಸ್ತಿಯ ಸರ್ವೆ ನಂಬರ್ 34/4ಬಿ ಮತ್ತು ವಾದಿಯರ ಆಸ್ತಿ ಸರ್ವೆ ನಂಬರ್ 34/4ಡಿ ಗೂ ಸಂಬಂಧ ಇಲ್ಲ ಎಂದರೆ ಸರಿ. ಸದರಿ 2 ಆಸ್ತಿಗಳ ಮಧ್ಯೆ ಸರ್ವೆ ನಂಬರ್ 34/4ಸಿ ಬರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 34/4ಬಿ ಆಸ್ತಿಯನ್ನು ಖರೀದಿಸಿ ವಾದಿಯರ ಆಸ್ತಿಯ ಸರ್ವೆ ನಂಬರ್ 34/4ಡಿ ನಮಗೆ ಸೇರಿದ್ದು ಎಂದು ಕ್ಲೈಮ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕಟ್ಟಿರುವ ಕಟ್ಟಡದ ವಿಸ್ತೀರ್ಣ 33X50 ಅಡಿ ಇರುತ್ತದೆ. ದಿಃ 20.12.1943 ರಂದು ಖರೀದಿಸಿದ ವಿಸ್ತೀರ್ಣದಲ್ಲಿ ಕಟ್ಟಿರುತ್ತೇನೆಂದರೆ ಸರಿಯಲ್ಲ. ನಾವು ವಾದಿಯ ತಂದೆ ಮರಿಯಣ್ಣನವರಿಂದ ಆಸ್ತಿ ಖರೀದಿಸಿದ ನಂತರ ಉಳಿದ 7 ಗುಂಟೆ ಆಸ್ತಿಯ ಖಾತೆ ಮತ್ತು ಪಹಣಿ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ದಾವೆಯನ್ನು ನಮ್ಮ ಕಟ್ಟಡದ ಹಿಂದಿನ ಜಾಗಕ್ಕೆ ಸಲ್ಲಿಸಿರುತ್ತಾರೆ. ಹಿಂದೆ ಇರುವ ಜಾಗದಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ಸದರಿ ಖಾಲಿ ಜಾಗದ ಉತ್ತರಕ್ಕೆ ಮನೆ, ಪಶ್ಚಿಮಕ್ಕೆ ವಾದಿಯರ ನಿವೇಶನ ಮತ್ತು ಮನೆ, ಪೂರ್ವಕ್ಕೆ ದೀಪಕ್ ಬಾರ್, ದಕ್ಷಿಣಕ್ಕೆ ನಮ್ಮ ಕಟ್ಟಡ ಇರುತ್ತದೆ. ಸದರಿ ಜಾಗಕ್ಕೆ ಸಂಬಂಧಿಸಿದಂತೆ ವಾದಿಯ ಹೆಸರಿನಲ್ಲಿ ಸರ್ವೆ ನಂಬರ್ 34/4ಡಿ ಎಂದು ಬರುತ್ತಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೀಪಕ್ ಬಾರ್ ನ ಹಿಂದೆ ಯಾವುದೇ ಜಾಗ ಇಲ್ಲ, ಇದ್ದಿದ್ದರೆ ಆ ಬಗ್ಗೆ ದಾಖಲೆಗಳನ್ನು ಒದಗಿಸುತ್ತಿದ್ದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಮುನಿಸಿಪಾಲಿಟಿ ಖಾತೆ ಇಲ್ಲ ಎಂದರೆ ಸರಿಯಲ್ಲ. ಯಾವುದೋ ಜಾಗವನ್ನು ಖರೀದಿಸಿ ವಾದಿಯ ಜಾಗಕ್ಕೆ ಮುನಿಸಿಪಾಲಿಟಿ ಅಧಿಕಾರಿಗಳೊಂದಿಗೆ ಶರೀಕಾಗಿ ಖಾತೆ

ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ವಾದಿ ಮುನಿಸಿಪಾಲಿಟಿಯವರ ಗಮನಕ್ಕೆ ತಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ಸರ್ವೆ ನಂಬರ್ 34/4ಡಿ ಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಬೇರೆ ಕಡೆ ಎಲ್ಲಿ ಜಾಗ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಯಾವುದೇ ವಿಚಾರ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಸ್ವಾಧೀನದಲ್ಲಿರುತ್ತದೆ ಮತ್ತು ಆ ಬಗ್ಗೆ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ಯಾವುದೋ ಜಾಗವನ್ನು ಖರೀದಿಸಿ ದಾವಾ ಆಸ್ತಿಗೆ ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸ್ ಮತ್ತು ಮುನಿಸಿಪಾಲಿಟಿಯವರಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಯಾವುದೇ ಕಟ್ಟಡ ಕಟ್ಟುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ನಾನು ಕಾಂಪೌಂಡ್ ಹಾಕಲು ಮುನಿಸಿಪಾಲಿಟಿಯಿಂದ ಲೈಸನ್ಸ್ ಪಡೆದುಕೊಂಡಿರುತ್ತೇನೆ. ಲೈಸನ್ಸ್ ಪಡೆದುಕೊಂಡು ಕಾಂಪೌಂಡ್ ಹಾಕಲು ಪ್ರಯತ್ನಪಟ್ಟಿರುತ್ತೇನೆ. ನಾನು ಕಾಂಪೌಂಡನ್ನು ಪ್ರಕರಣ ದಾಖಲಾದ ಕಾರಣ ಹಾಕಿರುವುದಿಲ್ಲ. ಲೈಸನ್ಸನ್ನು ಶರೀಕಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಾಸನ–ಬೇಲೂರು ಮುಖ್ಯ ರಸ್ತೆಯಲ್ಲಿರುತ್ತದೆ. ಶಿವಜ್ಯೋತಿ ಪಣ ಬೀದಿಗೂ ಮತ್ತು ಕಟ್ಟಡಕ್ಕೂ ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿ ಬಹಳ ದೂರ ಆಗುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಲೀಲಾವತಿ ಎನ್ನುವವರು ನಮ್ಮ ವಿರುದ್ಧ ಸಲ್ಲಿಸಿದ ದಾವೆಯ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾವೆ ಏನಾಯಿತು ಎಂದು ಗೊತ್ತಿಲ್ಲ. ಸದರಿ ದಾವೆಯಲ್ಲಿ ಆಸ್ತಿ ಶಿವಜ್ಯೋತಿ ಪಣ ಬೀದಿ ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಆಸ್ತಿ ಬೇರೆ ಇರುತ್ತದೆ. ಸದರಿ ಆಸ್ತಿಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ.

ವಾದಿಗೆ ಮೋಸ ಮಾಡಲು ಯಾವುದೋ ಬೇರೆ ಆಸ್ತಿಯನ್ನು ಖರೀದಿಸಿ ದಾವಾ ಆಸ್ತಿಯನ್ನು ಕ್ಲೈಮ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದುದರಿಂದ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯ ಸ್ವಾಧೀನದಲ್ಲಿದ್ದು, ಅದಕ್ಕೆ ಅಡ್ಡಿ ಪಡಿಸಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ:_</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು